KAYG300010292025



**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ , ಶೋರಾಪುರ**

: ಉಪಸ್ಥಿತರು :

**ಶ್ರೀಮತಿ ಫಕೀರವ್ವ ಕೆಳಗೇರಿ,** ಬಿ.ಎ.ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.
ದಂಡಾಧಿಕಾರಿಗಳು, ಶೋರಾಪುರ.

**ಕ್ರಿಮಿನಲ್ ಪ್ರಕರಣ ಸಂಖ್ಯೆ: 510/2025**

**ದಿನಾಂಕ: 02 ನೇ ಮೇ 2026**

**ಫಿರ್ಯಾದುದಾರರು** : ರಾಜ್ಯದ ಪರವಾಗಿ ಕೆಂಭಾವಿ ಪೋಲಿಸ್ ಠಾಣೆ

**( ಪ್ರತಿನಿಧಿಸುವವರು: ಸರ್ಕಾರಿ ಸಹಾಯಕ ಅಭಿಯೋಜಕರು)**

**ವಿರುದ್ಧ**

**ಆರೋಪಿತ** 1 ನಾನಾಗೌಡ ತಂದೆ ಸುಬ್ಬಣ್ಣಗೌಡ ಮಾಲಿ ಬಿರಾದರ, ವಃ 24 ವರ್ಷ, ಉಃ ಕೂಲಿ, ಸಾಃ ಗೌಡಗೇರಾ, ತಾಃ ಸುರಪೂರ, ಜಿಃ ಯಾದಗಿರಿ.

**(ಆರೋಪಿತನ ಪರ ಶ್ರೀ ಎಂ.ಎಂ.ಬಿ., ವಕೀಲರು)**

| | | |
|---|---|---|
| 1. | ತಕ್ಷೀರು ನಡೆದ ದಿನಾಂಕ | : 11-12-2024. |
| 2. | ತಕ್ಷೀರು ವರದಿ ಮಾಡಿದ ದಿನಾಂಕ | : 12-12-2024. |
| 3. | ದೂರುದಾರರು | : ಶ್ರೀ. ಸಿದ್ದಣ್ಣ ತಂದೆ ಶರಣಗೌಡ ಮಾವಿನ ಮಟ್ಟಿ. |
| 4. | ಸಾಕ್ಷಿದಾರರ ಹೇಳಿಕೆಯ ದಿನಾಂಕ | : 02-06-2026. |
| 5. | ಸಾಕ್ಷಿದಾರರ ಹೇಳಿಕೆಯ ಮುಕ್ತಾಯವಾದ ದಿನಾಂಕ | : 02-06-2026. |

6. ಆಪಾದಿಸಲಾದ ಆಪಾದನೆಗಳು : ಭಾ. ನ್ಯಾ. ಸಂ. ಕಲಂ.1159(2), 118(1), 352, 351(2) ಕಾಯಿದೆ ಅಡಿಯಲ್ಲಿ,

7. ನ್ಯಾಯಾಲಯದ ತೀರ್ಮಾನ : ನಿರ್ದೋಷಿ.

8. ತೀರ್ಪನ್ನು ಉದ್ಘೋಷಿಸಿದ ದಿನಾಂಕ : 02-06-2026.

**ತೀರ್ಪು**

ಕೆಂಭಾವಿ ಪೋಲಿಸ್ ಠಾಣೆಯ ಆರಕ್ಷಕ ಉಪ ನಿರೀಕ್ಷಕರು ಆರೋಪಿನ ವಿರುದ್ಧ ಭಾರತೀಯ ನ್ಯಾಯ ಸಂಹಿತೆ ಕಲಂ.115(2), 118(1), 352, 351(2) ರ ಅಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಗೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಗಿನಂತೆ ಇದೆಃ**

ದಿನಾಂಕಃ 11.12.2024 ರಂದು ಬೆ. 7.00 ಗಂಟೆಗಯ ಸುಮಾರಿಗೆ ಕೆಂಭಾವಿ ಪೋಲಿಸ್ ಠಾಣಾ ಹದ್ದಿಯ ಗೌಡಗೇರಿ ಗ್ರಾಮದ ಕೆಂಚಮ್ಮ ದೇವರ ಗುಡಿಯ ಮುಂದೆ ಚಾಸಾ-1 ರವರ ಕುಳಿತ್ತಿದ್ದಾಗ ಆರೋಪಿತನು ಚಾಸಾ-1 ರವರ ಹತ್ತಿರ ಬಂದವನೇ 'ಲೇ ಸೂಳೆ ಮಗನೇ ಸಿದಾ್ಯ ನಿನಗೆ ಎಷ್ಟೋಂದು ಸಲ ಹೇಳಬೇಕು ನಿಮ್ಮ ಖುಲ್ಲಾ ಜಾಗೆಯಲ್ಲಿ ಗೋಡೆ ಕಟ್ಟಿಕೋ ಅಂದರೂ ಕಟ್ಟಿಕೊಳ್ಳುತ್ತಿಲ್ಲ ನಾಯಿ ಹಂದಿಗಳು ನಮ್ಮ ಮನೆಯೊಳಗೆ ಬರುತ್ತಿವೆ ಸೂಳೆ ಮಗನೇ ನಿನ್ನ ಸೊಕ್ಕು ಬಹಳ ಆಗಿದೆ ಇವತ್ತು ನಿನಗೆ ಗತಿ ಕಾಣಿಸುತ್ತೇನೆ " ಅಂತಾ ಅಂದವನೇ ಚಾಸಾ-1 ರವರನ್ನು ಕೈ ಹಿಡಿದು ಜಗ್ಗಿ ಎಡಗೈ ತಿರುವಿ ಕೆಡವಿ ಕಾಲಿನಿಂದ ಕುತ್ತಿಗೆಯ ಮೇಲೆ ಒದ್ದು ಒಳಪೆಟ್ಟು ಮಾಡಿ, ಅಲ್ಲಿಯೇ ಬಿದ್ದಿದ್ದ ಒಂದು ಕಲ್ಲನ್ನು ತೆಗೆದುಕೊಂಡು ಚಾಸಾ-1 ರವರ ಹೊಟ್ಟೆಯ ಮೇಲೆ ಹೊಡೆದು ಒಳಪೆಟ್ಟು ಮಾಡಿ, ಚಾಸಾ-4 ರವರು ಚಾಸಾ-1 ರವರಗೆ ಹೊಡೆಯುವುದನ್ನು ನೋಡಿ ಬಿಡಿಸಲು ಹೋದಾಗ ಚಾಸಾ-4 ರವರಿಗೂ ಆರೋಪಿತನು 'ಏ ಸೂಳಿ ಚಂದಿ ಬಿಡಿಸಲು ಬಂದಿಯಾ ಅಂತಾ ಬೈಯಹತ್ತಿದ್ದು" ಆಗ ಚಾಸಾ-1 ರವರು ನನ್ನನ್ನು ಉಳಿಸಿಕೊಳ್ಳಿರಿ ಅಂತಾ ಚೀರಾಡುತ್ತಿರುವಾಗ ಅಲ್ಲಿಯೇ ಗುಡಿಯ ಕಟ್ಟೆಯ ಮೇಲೆ ಕುಳಿತ್ತಿದ್ದ ಚಾಸಾ-5 ಮತ್ತು ಚಾಸಾ-6 ರವರು ನೋಡಿ ಆರೋಪಿತನು ಹೊಡೆಯುವುದನ್ನು ಬಿಡಿಸಿದ್ದು ಹೋಗುವಾಗ ಆರೋಪಿತನು ಚಾಸಾ-1 ರವರಿಗೆ

ಲೇ ಸೂಳೆ ಮಗನೇ ಸಿದ್ದ್ಯಾಯ ಇವತ್ತು ನನ್ನ ಕೈಯಲ್ಲಿ ಉಳಿದುಕೊಂಡಿದಿ ನಿನೇನಾದರೂ ಗೋಡೆ ಕಟ್ಟದೇ ಇದ್ದರೇ ನಿನಗೆ ಜೀವ ಸಹಿತ ಬಿಡುವುದಿಲ್ಲ ಅಂತ ಜೀವ ಬೇದರಿಕೆ ಹಾಕಿರುವುದು ಪ್ರಕರಣದ ತನಿಖೆಯಿಂದ ಮತ್ತು ಸಾಕ್ಷಿದಾರರ ಹೇಳಿಕೆಯಿಂದ ಆರೋಪಿತರು ಅಪರಾಧ ಮಾಡಿದ್ದು ದೃಡಪಟ್ಟಿರುತ್ತದೆ. ಆದ್ದರಿಂದ ಭಾ. ನ್ಯಾ . ಸಂ. ಕಲಂ.115(2), 118(1), 352, 351(2) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುವುದಾಗಿ ಚಾಸಾ-1 ರವರು ಆರೋಪಿತನ ವಿರುದ್ದ ನೀಡಿದ ಲಿಖಿತ ಫಿರ್ಯಾದಿಯನ್ವಯ ಕೆಂಭಾವಿ ಪೊಲೀಸರು ತನಿಖೆಯನ್ನು ಕೈಗೊಂಡು ಆರೋಪಿತನ ವಿರುದ್ದ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

**3.** ದೋಷಾರೋಪಣಾ ಪಟ್ಟಿ ಸಲ್ಲಿಸಿದ ನಂತರ ಈ ನ್ಯಾಯಾಲಯವು ಭಾರತೀಯ ನ್ಯಾಯ ಸಂಹಿತೆಯ ಕಲಂ.115(2), 118(1), 352, 351(2) ರಡಿಯಲ್ಲಿ ಶಿಕ್ಷಾರ್ಹ ಕೃತ್ಯಗಳ ಬಗ್ಗೆ ಸಂಜ್ಞೆಯತೆ ತೆಗೆದುಕೊಂಡಿರುತ್ತದೆ. ನಂತರ ಆಪಾದಿತನು ನ್ಯಾಯಾಲಯದಿಂದ ಜಾಮೀನು ಪಡೆದು ಬಿಡುಗಡೆಯಾಗಿರುತ್ತಾರೆ. ದೋಷಾರೋಪಣಾ ಪತ್ರ ಮತ್ತು ಅದಕ್ಕೆ ಲಗತ್ತಿಸಿರುವ ಎಲ್ಲಾ ದಾಖಲಾತಿಗಳ ಪ್ರತಿಗಳನ್ನು ಆಪಾದಿತನಿಗೆ ನೀಡಲಾಗಿದೆ. ಮೇಲ್ಕಂಡ ಕಲಂಗಳ ಬಾಬ್ತು ಆರೋಪಣೆಯನ್ನು ರಚಿಸಿ ಅವುಗಳನ್ನು ಆಪಾದಿತನಿಗೆ ವಿವರಿಸಿ ಓದಿ ಹೇಳಲಾಗಿದೆ. ಆಪಾದಿತನು ತಪ್ಪು ಮಾಡಿರುವುದಿಲ್ಲ ಮತ್ತು ವಿಚಾರಣೆ ಆಗಬೇಕೆಂದು ತಿಳಿಸಿದ್ದರಿಂದ ಪ್ರಕರಣವನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲಾಗಿದೆ.

**4.** ಆಪಾದಿತನ ಮೇಲೆ ಹೊರಿಸಲಾಗಿರುವ ಆಪಾದನೆಗಳನ್ನು ರುಜುವಾತುಪಡಿಸಲು ಅಭಿಯೋಜನೆಯು ದೋಷಾರೋಪಣಾ ಪತ್ರದಲ್ಲಿ 10 ಸಾಕ್ಷಿದಾರರನ್ನು ನಮೂದಿಸಿ, ಪಿರ್ಯಾದಿ ಸಾಕ್ಷಿಯನ್ನು ಪ್ರಾಸಾ-1, ಚಾಸಾ-4 ರವರನ್ನು ಪ್ರಾಸಾ-2 ಎಂದು ವಿಚಾರಣೆಗೊಳಪಡಿಸಿರುತ್ತದೆ. ಅದೇ ರೀತಿ 7 ದಾಖಲಾತಿಗಳನ್ನು ನಿಶಾನೆಗಳಾಗಿ ನಿಪಿ-1 ರಿಂದ ನಿಪಿ-7 ಎಂದು ಗುರುತಿಸಿಕೊಂಡಿರುತ್ತಾರೆ.

**5.** ಅಪರಾಧಿಕ ದಂ.ಪ್ರ.ಸಂ.ಕಲಂ.313 ರ ಅಡಿಯಲ್ಲಿ ಆರೋಪಿತನ ವಿರುದ್ದ ಯಾವುದೇ ಸಾಕ್ಷ್ಯ ಇಲ್ಲದ ಕಾರಣ ಅವರ ಹೇಳಿಕೆಗಳನ್ನು ವಿನಾಯತಿಗೊಳಿಸಿದೆ.

**6.** ಉಭಯಪಕ್ಷಗಾರರ ಪರ ಮಂಡಿಸಿದ ವಾದ ವಿವಾದಗಳನ್ನು ಆಲಿಸಲಾಗಿದೆ. ಕಡತದಲ್ಲಿ ಲಭ್ಯವಿರುವ ಸಾಕ್ಷ್ಯಾದಾರಗಳನ್ನು ಪರಿಶೀಲಿಸಿರುತ್ತೇನೆ.

**7.** ಈ ಮೇಲಿನ ಮೊಕದ್ದಮೆಯಲ್ಲಿ ನ್ಯಾಯಾಲಯವು ತೀರ್ಮಾನಿಸಬೇಕಾದ ಅಂಶಗಳು ಈ ಕೆಳಕಂಡಂತಿದೆ.

**ಅಂಶಗಳು**

1. ದಿನಾಂಕಃ 11.12.2024 ರಂದು ಬೆ. 7.00 ಗಂಟೆಯ ಸುಮಾರಿಗೆ ಕೆಂಭಾವಿ ಪೋಲೀಸ ಠಾಣೆಯ ಹದ್ದಿಯ ಗೌಡಗೇರಾ ಗ್ರಾಮದ ಕೆಂಚಮ್ಮ ದೇವರ ಗುಡಿಯ ಮುಂದೆ ಚಾಸಾ-1 ರವರು ಕುಳಿತ್ತಿದ್ದಾಗ ಆರೋಪತನು ಚಾಸಾ-1 ರವರ ಕೈ ಹಿಡಿದು ಜಗ್ಗಿ ಎಡಗೈ ತಿರುವಿ ಕೆಳಗೆ ಕೆಡವಿ ಕಾಲಿನಿಂದ ಕುತ್ತಿಗೆಯ ಮೇಲೆ ಒದ್ದು ಒಳಪೆಟ್ಟು ಮಾಡಿದ್ದು ಈ ಭಾ.ನ್ಯಾಸಂ.ಕಲಂ.115(2) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ ಆಪಾದನೆಯನ್ನು ಅಭಿಯೋಜನೆಯು ಸಂಶಾಯಾತೀತವಾಗಿ ರುಜುವಾತು ಪಡಿಸಿರುವುದೇ ?
2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ಅಲ್ಲಿಯೇ ಬಿದ್ದಿದ್ದ ಕಲ್ಲನ್ನು ತೆಗೆದುಕೊಂಡು ಚಾಸಾ-1 ರವರ ಹೊಟ್ಟೆಯ ಮೇಲೆ ಹೊಡೆದು ರಕ್ತಗಾಯ ಮಾಡಿ ಈ ಭಾ.ನ್ಯಾ. ಸಂ.ಕಲಂ.118(1) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ ಆಪಾದನೆಯನ್ನು ಅಭಿಯೋಜನೆಯು ಸಂಶಾಯಾತೀತವಾಗಿ ರುಜುವಾತು ಪಡಿಸಿರುವುದೇ ?
3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ಚಾಸಾ-1 ರವರ ಜೊತೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಈ ಭಾ.ನ್ಯಾ. ಸಂ.ಕಲಂ.352 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ ಆಪಾದನೆಯನ್ನು ಅಭಿಯೋಜನೆಯು ಸಂಶಾಯಾತೀತವಾಗಿ ರುಜುವಾತು ಪಡಿಸಿರುವುದೇ ?
4. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ಚಾಸಾ-1 ರವರಿಗೆ ಜೀವ ಬೆದರಿಕೆ ಹಾಕಿ ಈ ಭಾ.ನ್ಯಾ. ಸಂ.ಕಲಂ.351(2) ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಕ್ಕೆ ರಚಿತವಾದ

ಆಪಾದನೆಯನ್ನು ಅಭಿಯೋಜನೆಯು ಸಂಶಾಯಾತೀತವಾಗಿ ರುಜುವಾತು ಪಡಿಸಿರುವುದೇ ?

5. ಯಾವ ಆದೇಶ ?

**8.**ಮೇಲೆ ಹೇಳಿದ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತೆ ಇರುತ್ತದೆ.

ಅಂಶ 1 ರಿಂದ 5 : ನಕರಾತ್ಮಕ

ಅಂಶ 6 : ಅಂತಿಮ ಆದೇಶ ಈ ಕೆಳಕಂಡಂತೆ

**ಕಾರಣಗಳು**

**9. ಅಂಶ-1 ರಿಂದ 5:** ಅಂಶ 1 ರಿಂದ 5 ಒಂದೇ ಘಟನೆಯಿಂದ ಉದ್ಭವಿಸಿರುವುದರಿಂದ ಸಂಗತಿಗಳು ಹಾಗೂ ಚರ್ಚೆಯ ಪುನರಾವರ್ತನೆಯಾಗುವುದನ್ನು ತಡೆಯುವ ಸಲುವಾಗಿ ಸದರಿ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

**10.** ಈ ಮೇಲೆ ಪ್ರಸ್ತಾಪಿಸಿರುವ ಕಲಮಿನ್ವಯ ಆರೋಪಿತನ ವಿರುದ್ದ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಅಪರಾಧಿಕ ಕಾನೂನನ್ನು ಚಾಲನೆಗೆ ತಂದಂತಹ ಚಾಸಾ-1 ರವರು ದೂರುದಾರರಾಗಿರುತ್ತಾರೆ, ಸದರಿ ಪ್ರಕರಣದಲ್ಲಿ ಚಾಸಾ-1 ರವರನ್ನು ಅಭಿಯೋಜನೆಯು ಫ್ರಾಸಾ-1 ಎಂದು ವಿಚಾರಣೆಗೊಳಪಡಿಸಿರುತ್ತದೆ. ಸದರಿ ಸಾಕ್ಷಿಯು ತನ್ನ ಮುಖ್ಯ ವಿಚಾರಣೆಯಲ್ಲಿ, ಆರೋಪಿತನಿಗೂ ಮತ್ತು ತಮಗೂ ಬಾಯಿ ಮಾತಿನ ಗಲಾಟೆ ಆಗಿರುತ್ತದೆ ಎಂತಲೂ, ತಾನು ಪೊಲೀಸರ ಕೋರಿಕೆಯ ಮೇರೆಗೆ ಎರಡು ದಾಖಲೆ ಮೇಲೆ ಸಹಿ ಮಾಡಿದ್ದು ಸದರಿ ದಾಖಲೆಗಳು ದೂರು ಮತ್ತು ಪಂಚನಾಮೆ ಆಗಿರುತ್ತವೆ ಎಂತಲೂ, ಆರೋಪಿತನು ತನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಜೀವ ಬೆದರಿಕೆ ಹಾಕಿರುವುದಿಲ್ಲ, ಕೈ ಹಿಡಿದು ಕಲ್ಲಿನಿಂದ ಹೊಡೆದಿರುವುದಿಲ್ಲ ಎಂತಲೂ, ಈ ಕುರಿತು ತಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆಯು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀಸವಾಲಿಗೊಳಪಡಿಸಿದಾಗ, ಪಾಟೀಸವಾಲಿನಲ್ಲಿ ಅಭಿಯೋಜನೆಗೆ ಪೂರಕವಾಗುವ ಯಾವುದೇ ಅಂಶವನ್ನು ನುಡಿದಿರುವುದಿಲ್ಲ. ಆದ್ದರಿಂದ ಸದರಿಯವರ ಸಾಕ್ಷವು ಅಭಿಯೋಜನೆಗೆ ಸಹಕಾರಿಯಾಗುವುದಿಲ್ಲ.

**11.** ಚಾಸಾ-4/ಪ್ರಾಸಾ-2 ರವರು ಪ್ರತ್ಯಕ್ಷ ಸಾಕ್ಷಿಯಾ ಅಭಿಯೋಜನೆಯ ಗುರುಪಡಿಸಿದಾಗ ಪ್ರಾಸಾ-1 ರವರಂತೆ ತನ್ನ ಮುಖ್ಯ ವಿಚಾರಣೆಯಲ್ಲಿ, ಆರೋಪಿತನಿಗೂ ಮತ್ತು ತಮಗೂ ಬಾಯಿ ಮಾತಿನ ಗಲಾಟೆ ಆಗಿರುತ್ತದೆ ಎಂತಲೂ, ತಾನು ಪೊಲೀಸರ ಕೋರಿಕೆಯ ಮೇರೆಗೆ ಎರಡು ದಾಖಲೆ ಮೇಲೆ ಸಹಿ ಮಾಡಿದ್ದು ಸದರಿ ದಾಖಲೆಯು ತನ್ನ ಹೇಳಿಕೆಯಾಗಿರುತ್ತದೆ ಎಂತಲೂ, ಆರೋಪಿತನು ತನಗೆ ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ, ಜೀವ ಬೆದರಿಕೆ ಹಾಕಿರುವುದಿಲ್ಲ, ಈ ಕುರಿತು ತಾನು ಪೊಲೀಸರಿಗೆ ಹೇಳಿಕೆ ನೀಡಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆಯು ಸದರಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿದಾರರೆಂದು ಪರಿಗಣಿಸಿ ಪಾಟೀಸವಾಲಿಗೊಳಪಡಿಸಿದಾಗ, ಪಾಟೀಸವಾಲಿನಲ್ಲಿ ಅಭಿಯೋಜನೆಗೆ ಪೂರಕವಾಗುವ ಯಾವುದೇ ಅಂಶವನ್ನು ನುಡಿದಿರುವುದಿಲ್ಲ. ಆದ್ದರಿಂದ ಸದರಿಯವರ ಸಾಕ್ಷವು ಅಭಿಯೋಜನೆಗೆ ಸಹಕಾರಿಯಾಗುವುದಿಲ್ಲ.

**12.** ಮೇಲ್ಕಂಡ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯಗಳನ್ನು ಪರಿಶೀಲಿಸಲಾಗಿ ಪ್ರಾಸಾ.1 ರವರು ದೂರುದಾರಾಗಿದ್ದು ಮತ್ತು ಪ್ರಾಸಾ-2 ರವರು ಪ್ರತ್ಯಕ್ಷ ಸಾಕ್ಷಿಯಾಗಿದ್ದರೂ ಸಹ ಅಭಿಯೋಜನೆಯ ಪ್ರತಿಪಾದನೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿದ್ದರಿಂದ ಅಭಿಯೋಜನೇಯ ಮನವಿಯನ್ನು ತಿರಸ್ಕರಿಸಿ ಉಳಿದ ಸಾಕ್ಷಿದಾರರ ವಿಚಾರಣೆಯನ್ನು ಕೈಬಿಡಲಾಗಿದೆ. ಪ್ರಾಸಾ-1 ರವರು ದೂರುದಾರಾಗಿದ್ದು ನಿಪಿ-1 ರಂತೆ ಪೋಲಿಸರಿಗೆ ದೂರನ್ನು ಕೊಟ್ಟಿದ್ದರೂ ಸಹ ಈಗ ತಾನು ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಪ್ರಾಸಾ-1 ರವರು ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡಿರುವುದಾಗಿ ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಆರೋಪಿತನ ವಿರುದ್ಧದ ಆಪಾದನೆಯನ್ನು ರುಜುವಾತುಪಡಿಸಲು ಯಾವುದೇ ಅಂಶಗಳನ್ನು ಅಭಿಯೋಜನೆಯು ಪಾಟೀಸವಾಲು ಮಾಡಿದಾಗ ಹೊರತೆಗೆದಿಲ್ಲ. ಆರೋಪಿತನ ವಿರುದ್ಧ ಆಭಿಯೋಜನೆಯು ಆರೋಪ ಮಾಡಿದಾಗ ರುಜುವಾತುಪಡಿಸುವ ಹೊಣೆಗಾರಿಕೆ ಅವರ ಮೇಲೆ ಇರುತ್ತದೆ. ಪ್ರಸ್ತುತ ಪ್ರಕರಣದಲ್ಲಿ ಅಭಿಯೋಜನೆಯವರು ವಿಚಾರಣೆಗೆ ಒಳಪಡಿಸಿದ ಸಾಕ್ಷಿದಾರರು ಅವರ ಪ್ರತಿಪಾದನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿಲ್ಲ. ಆದ್ದರಿಂದ ಅಭಿಯೋಜನೆಯ

ಪ್ರತಿಪಾದನೆಯು ಮೇಲೆ ಚರ್ಚಿಸಿದ ಕಾರಣಗಳಿಂದ ಅನುಮಾನಾಸ್ಪದವಾಗಿರುತ್ತದೆ. ಆದ್ದರಿಂದ ಆರೋಪಿತನು ಈ ಸಂಶಯದ ಲಾಭವನ್ನು ಪಡೆಯಲು ಅರ್ಹರಾಗಿರುತ್ತಾರೆ. ಈ ಮೇಲೆ ಚರ್ಚಿಸಿದ ಎಲ್ಲಾ ವಿಷಯಗಳಿಗನುಸಾರವಾಗಿ, ಆರೋಪಿತನ ವಿರುದ್ಧ ಮಾಡಲಾದ ಆಪಾದನೆಯನ್ನು ಸಂಶಯಾತೀತವಾಗಿ ರುಜುವಾತುಪಡಿಸಲು ಅಭಿಯೋಜನೆಯು ವಿಫಲವಾಗಿರುತ್ತದೆಯೆಂದು ಈ ನ್ಯಾಯಾಲಯವು ಅಭಿಪ್ರಾಯಕ್ಕೆ ಬಂದು **ಅಂಶ-1 ರಿಂದ 5 ಕ್ಕೆ ನಕರಾತ್ಮಕವಾಗಿ ಉತ್ತರಿಸಿರುತ್ತದೆ.**

**13.** **ಅಂಶ-6**: 1 ರಿಂದ 5 ನೇ ಅಂಶಗಳಲ್ಲಿ ಚರ್ಚಿಸಿದ ಕಾರಣಗಳಿಗೆ ಬಂದ ತೀರ್ಮಾನದಂತೆ, ಈ ಕೆಳಕಂಡಂತೆ ಮಾಡುವ,

## ಆದೇಶ

ದಂಡ ಪ್ರಕ್ರಿಯಾ ಸಂಹಿತೆಯ ಕಲಂ. 271 ರ ಅಡಿಯಲ್ಲಿ ಪ್ರದತ್ತವಾಗಿರುವ ಅಧಿಕಾರವನ್ನು ಚಲಾಯಿಸಿ ಆರೋಪಿತನನ್ನು ಭಾರತೀಯ ನ್ಯಾಯ ಸಂಹಿತೆ ಕಲಂ.115(2), 118(1), 352, 351(2) ರ ಅಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧಗಳಿಂದ ಬಿಡುಗಡೆ ಮಾಡಲಾಗಿದೆ.

ಆರೋಪಿತನ ಪರ ಜಾಮೀನುದಾರರು ಬರೆದುಕೊಟ್ಟಿರುವಂತಹ ಜಾಮೀನು ಮುಚ್ಚಳಿಕೆ ಪತ್ರಗಳನ್ನು ರದ್ದುಗೊಳಿಸಲಾಗಿದೆ.

(ಶೀಘ್ರ ಲಿಪಿಗಾರರರಿಗೆ ನೇರವಾಗಿ ಗಣಕಯಂತ್ರದ ಮೇಲೆ ಉಕ್ತಲೇಖರ ನೀಡಿ, ಅವರು ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿದ್ದು, ತಪ್ಪುಗಳನ್ನು, ಸರಿಪಡಿಸಿದ ನಂತರ, ತೆರೆದ ನ್ಯಾಯಾಲಯದಲ್ಲಿ ಈ ದಿನ ಅಂದರೆ 02 ನೇ ಮೇ 2026 ರಂದು ಉದ್ಘೋಷಿಸಿಲಾಯಿತು).

**(ಶ್ರೀಮತಿ ಫಕಿರವ್ವ ಕೆಳಗೇರಿ)**
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಶೋರಾಪುರ

**ಅನುಬಂಧ**

**ಅಭಿಯೋಜನೆ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿಃ**

ಪ್ರಾಸಾ-1 : ಸಿದ್ದಣ್ಣ ತಂದೆ ಶರಣಪ್ಪಗೌಡ.

ಪ್ರಾಸಾ-2 : ಚಂದಮ್ಮ ಗಂಡ ಸಿದ್ದಣ್ಣ.

**ಅಭಿಯೋಜನೆ ಪರ ನಿಷಾನೆ ಮಾಡಲಾದ ದಾಖಲೆಗಳ ಪಟ್ಟಿಃ**

ನಿಪಿ-1 : ದೂರು

ನಿಪಿ-2 : ಗುನ್ನೆ ಸ್ಥಳ ಪಂಚನಾಮೆ.

ನಿಪಿ-3 ರಿಂದ 6: ಭಾವಚಿತ್ರಗಳು .

ನಿಪಿ-7 : ಪ್ರಾಸಾ-2 ರವರ ಹೇಳಿಕೆ.

**ಅಭಿಯೋಜನೆ ಪರ ನಿಷಾನೆ ಮಾಡಲಾದ ಮುದ್ದೇ ಮಾಲುಗಳ ಪಟ್ಟಿಃ**

-ಇಲ್ಲ -

**ಆರೋಪಿತನ ಪರ ವಿಚಾರಣೆ ಮಾಡಿದ ಸಾಕ್ಷಿಗಳ ಪಟ್ಟಿಃ**

-ಇಲ್ಲ -

**ಆರೋಪಿತನ ಪರ ನಿಷಾನೆ ಮಾಡಲಾದ ದಾಖಲೆಗಳ ಪಟ್ಟಿಃ**

-ಇಲ್ಲ -

FAKIRAWWA VASANT KELAGERI

Digitally signed by FAKIRAWWA VASANT KELAGERI
Date: 2026.06.01 21:35:28 +0530

**(ಶ್ರೀಮತಿ ಫಕಿರವ್ವ ಕೆಳಗೇರಿ)**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ, ಶೋರಾಪುರ.